All India Radio: Bangalore
National Bulletin In Kannada
08.01.2026  07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
08.01.2026  07.35 a.m.
<><><><>

ಮುಖ್ಯಾಂಶಗಳು

- ೨೦೨೭ರ ಜನಗಣತಿಯ ಮೊದಲ ಹಂತಕ್ಕೆ ಅಧಿಸೂಚನೆ ಪ್ರಕಟ ; ಏಪ್ರಿಲ್ ೧ರಿಂದ ಗಣತಿ ಕಾರ್ಯ ಆರಂಭ
- ಸಮೃದ್ಧ ಭಾರತದ ಕನಸು ಸಾಕಾರಕ್ಕೆ ದೇಶದಲ್ಲಿ ಸುಧಾರಣಾ ಪರ್ವ ಮತ್ತಷ್ಟು ಚುರುಕು – ಪ್ರಧಾನಿ ನರೇಂದ್ರ ಮೋದಿ
- ಫ್ರಾನ್ಸ್-ಭಾರತದ ಅತ್ಯಂತ ಹಳೆಯ ಕಾರ್ಯತಾಂತ್ರಿಕ ಪಾಲುದಾರ ರಾಷ್ಟ್ರ – ಸಚಿವ ಡಾ.ಎಸ್.ಜೈಶಂಕರ್
- ಕೀಟನಾಶಕಗಳ ನಿರ್ವಹಣಾ ಮಸೂದೆ ೨೦೨೫ ಕರಡಿನ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನ
- ಐಸಿಸಿ ಮಹಿಳಾ ಟಿ-೨೦ ವಿಶ್ವಕಪ್ ; ಅರ್ಹತಾ ಪಂದ್ಯಗಳ ವೇಳಾಪಟ್ಟಿ ಪ್ರಕಟ

<><><><>

೨೦೨೭ರ ಭಾರತದ ಜನಗಣತಿಯ ಮೊದಲ ಹಂತಕ್ಕೆ ಕೇಂದ್ರ ಸರ್ಕಾರವು  ಅಧಿಸೂಚನೆ ಹೊರಡಿಸಿದೆ. ಈ ವರ್ಷದ ಏಪ್ರಿಲ್ ೧ ರಿಂದ ಸೆಪ್ಟೆಂಬರ್ ೩೦ ರವರೆಗೆ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮನೆಗಳ ಪಟ್ಟಿ ಕಾರ್ಯಾಚರಣೆಗಳನ್ನು ಪ್ರತಿ ರಾಜ್ಯ/ಕೇಂದ್ರಾಡಳಿತ ಪ್ರದೇಶವು ನಿರ್ದಿಷ್ಟಪಡಿಸಿದ ೩೦ ದಿನಗಳ ಅವಧಿಯಲ್ಲಿ ನಡೆಸಲಾಗುವುದು. ಪ್ರತಿ ರಾಜ್ಯ/ಕೇಂದ್ರಾಡಳಿತ ಪ್ರದೇಶವು ಸೂಚಿಸಿದ ವೇಳಾಪಟ್ಟಿಯ ಪ್ರಕಾರ, ಮನೆ-ಮನೆ ಮನೆಗಳ ಪಟ್ಟಿ ಆರಂಭವಾಗುವ ಮೊದಲು ೧೫ ದಿನಗಳ ಅವಧಿಗೆ ಸ್ವಯಂ-ಗಣತಿಗೆ ಅವಕಾಶ ಲಭ್ಯವಿರುತ್ತದೆ ಎಂದು ಗೃಹ ಸಚಿವಾಲಯ ಹೊರಡಿಸಿರುವ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಇದು ದೇಶದಲ್ಲಿ ಮೊದಲ ಡಿಜಿಟಲ್ ವಿಧಾನದ ಮೂಲಕ ನಡೆಯುವ ಜನಗಣತಿಯಾಗಿದ್ದು, ಆಂಡ್ರಾಯ್ಡ್ ಮತ್ತು ಐಒಎಸ್ ಲಭ್ಯವಿರುವ ಮೊಬೈಲ್ ಅಪ್ಲಿಕೇಶನ್‌ಗಳನ್ನು ಬಳಸಿಕೊಂಡು ದತ್ತಾಂಶವನ್ನು ಸಂಗ್ರಹಿಸಲಾಗುತ್ತದೆ. ಗಣತಿದಾರರು, ಮೇಲ್ವಿಚಾರಕರು, ಮಾಸ್ಟರ್ ತರಬೇತುದಾರರು, ಉಸ್ತುವಾರಿ ಅಧಿಕಾರಿಗಳು ಮತ್ತು ಪ್ರಧಾನ ಅಥವಾ ಜಿಲ್ಲಾ ಜನಗಣತಿ ಅಧಿಕಾರಿಗಳು ಸೇರಿದಂತೆ ಸುಮಾರು ೩೦ ಲಕ್ಷ ಕಾರ್ಯಕರ್ತರನ್ನು ಜನಗಣತಿ ಕಾರ್ಯಾಚರಣೆಗಳ ದತ್ತಾಂಶ ಸಂಗ್ರಹಣೆ ಮತ್ತು ಮೇಲ್ವಿಚಾರಣೆಗಾಗಿ ನಿಯೋಜಿಸಲಾಗುವುದು. ಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲಾಗುವುದು. ಮೊದಲ ಹಂತವು ಮನೆಗಳ ಪಟ್ಟಿ ಮತ್ತು ವಸತಿ ಗಣತಿ - ಏಪ್ರಿಲ್ ನಿಂದ ಸೆಪ್ಟೆಂಬರ್, ೨೦೨೬ ರವರೆಗೆ, ಎರಡನೇ ಹಂತವು ಫೆಬ್ರವರಿ ೨೦೨೭ರಲ್ಲಿ ಜನಸಂಖ್ಯಾ ಗಣತಿ  ನಡೆಯಲಿದೆ.

ಇದಕ್ಕೂ ಮುನ್ನ ಕಳೆದ ತಿಂಗಳು ೧೨ ರಂದು, ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟವು ೨೦೨೭ರ ಜನಗಣತಿ ಕಾರ್ಯಕ್ಕೆ  ೧೧, ೭೧೮.೨೪ ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಡೆಸುವ ಯೋಜನೆಗೆ ಅನುಮೋದನೆ ನೀಡಿತ್ತು. ಅಲ್ಲದೆ, ಕಳೆದ ವರ್ಷ ಏಪ್ರಿಲ್ ೩೦ ರಂದು ನಡೆದ ಸಭೆಯಲ್ಲಿ ರಾಜಕೀಯ ವ್ಯವಹಾರಗಳ ಕುರಿತಾದ ಸಂಪುಟ ಸಮಿತಿಯು ಜನಗಣತಿಯಲ್ಲಿ ಜಾತಿ ಗಣತಿಯನ್ನು ಸೇರ್ಪಡೆ ಮಾಡಲು ನಿರ್ಧರಿಸಿತ್ತು.

<><><><>

ದೇಶದಲ್ಲಿ ಸುಧಾರಣಾ ಪರ್ವ ಮತ್ತಷ್ಟು ಚುರುಕುಗೊಂಡಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಜಿಡಿಪಿ ಸಂಖ್ಯೆಗಳ ಕುರಿತಂತೆ ಪ್ರತಿಕ್ರಿಯಿಸಿರುವ ಅವರು, ಎನ್‌ಡಿಎ ಸರ್ಕಾರದ ಸಮಗ್ರ ಹೂಡಿಕೆಗೆ ಒತ್ತು ಹಾಗೂ ಬೇಡಿಕೆ ಆಧರಿತ ನೀತಿ ನಿರೂಪಣೆಗಳಿಂದಾಗಿ ಇದು ಸಾಧ್ಯವಾಗಿದೆ. ಸಮೃದ್ಧ ಭಾರತದ ಕನಸನ್ನು ಸಕಾರಗೊಳಿಸಲು ಸರ್ಕಾರ ಎಲ್ಲ ರೀತಿಯಲ್ಲೂ ಕಾರ್ಯ ನಿರ್ವಹಿಸುತ್ತಿದೆ ಎಂದರು. ಮೂಲಸೌಕರ್ಯ ವೃದ್ಧಿಗೆ ಆದ್ಯತೆ ನೀಡಿರುವುದು, ಉತ್ಪಾದನಾ ವಲಯದಲ್ಲಿ ಪ್ರೋತ್ಸಾಹ ಧನ ವಿತರಣೆ, ಸಾರ್ವಜನಿಕ ಒಳಿತಿಗಾಗಿ ಡಿಜಿಟಲ್ ಉಪಕ್ರಮಗಳು ಅಥವಾ ಸುಗಮ ವ್ಯಾಪಾರಕ್ಕೆ ಅನುಕೂಲಕರ ವಾತಾವರಣ ನಿರ್ಮಾಣ ಸೇರಿದಂತೆ ಹಲವು ಉಪಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

<><><><>

ಫ್ರಾನ್ಸ್ ಭಾರತದ ಅತ್ಯಂತ ಹಳೆಯ ಕಾರ್ಯತಂತ್ರದ ಪಾಲುದಾರರಲ್ಲಿ ಒಂದಾಗಿದೆ ಮತ್ತು ಬಹುಧ್ರುವೀಯತೆಗೆ ಬದ್ಧವಾಗಿರುವ ಎರಡು ರಾಷ್ಟ್ರಗಳು ಈ ಹಂತದಲ್ಲಿ ಜಾಗತಿಕ ರಾಜಕೀಯವನ್ನು ಸ್ಥಿರಗೊಳಿಸಲು ಒಗ್ಗೂಡಿ ಕಾರ್ಯನಿರ್ವಹಿಸುವುದು ಮುಖ್ಯ ಎಂದು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಹೇಳಿದ್ದಾರೆ. ಪ್ಯಾರಿಸ್‌ನಲ್ಲಿ ಫ್ರಾನ್ಸ್ ವಿದೇಶಾಂಗ ಸಚಿವ ಜೀನ್-ನೋಯೆಲ್ ಬ್ಯಾರಟ್ ಅವರೊಂದಿಗಿನ ಭೇಟಿಯ ಸಂದರ್ಭದಲ್ಲಿ ಮಾತನಾಡಿದ ಅವರು, ಉಭಯ ದೇಶಗಳ ಸಂಬಂಧವನ್ನು ಪೋಷಿಸುವಲ್ಲಿ ನಿರಂತರ ಸಂಭಾಷಣೆ ಒಂದು ಪ್ರಮುಖ ಭಾಗವಾಗಿದೆ ಎಂದು ಹೇಳಿದ್ದಾರೆ. ಗಣನೀಯ ಜಾಗತಿಕ ಅನಿಶ್ಚಿತತೆಯ ಹಿನ್ನೆಲೆಯಲ್ಲಿ ಸಭೆ ನಡೆಯುತ್ತಿದ್ದು, ಕಾರ್ಯತಂತ್ರದ ಪಾಲುದಾರರು ಬಹಳ ನಿಕಟವಾಗಿ ಸಮಾಲೋಚಿಸುವುದು ಸಹಜ ಎಂದು ಅವರು ತಿಳಿಸಿದರು.

ಬೈಟ್: ಜೈಶಂಕರ್ ( ೨೦ ಸೆಕೆಂಡ್ ಗಳು)

<><><><>

ಕೀಟನಾಶಕಗಳ ನಿರ್ವಹಣಾ ಮಸೂದೆ-೨೦೨೫ ಕರಡು ಕುರಿತು ಕೇಂದ್ರ ಸರ್ಕಾರ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿದೆ. ಇಂದಿನ ಅಗತ್ಯತೆಗಳಿಗೆ ತಕ್ಕಂತೆ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ ಕರಡು ಮಸೂದೆಯನ್ನು ಸಿದ್ಧಪಡಿಸಿದೆ. ಹಾಲಿಯಿರುವ ಕೀಟನಾಶಕಗಳ ಕಾಯ್ದೆ ೧೯೬೮ ಮತ್ತು ಕೀಟನಾಶಕಗಳ ನಿಮಯ ೧೯೭೧ ಅನ್ನು ಬದಲಿಸಲು ಹೊಸ ಕಾಯ್ದೆಯನ್ನು ತರಲು ಉದ್ದೇಶಿಸಲಾಗಿದೆ.

ಹೊಸ ಕಾಯ್ದೆಯಡಿ ಪಾರದರ್ಶಕತೆ ಮತ್ತು ರೈತರಿಗೆ ಉತ್ತಮ ಸೇವೆಗಳನ್ನು ಖಾತರಿಪಡಿಸುವುದು ಮತ್ತು ನಿಯಮಗಳ ಉಲ್ಲಂಘಿಸುವವರಿಗೆ ದಂಡನಾ ಪ್ರಮಾಣ ಹೆಚ್ಚಿಸುವುದು ಹಾಗೂ ಸುಲಭ ವ್ಯಾಪಾರ ಹಾಗೂ ಸುಗಮ ಜೀವನದ ನಡುವೆ ಸಮತೋಲನಾ ಕಾಯ್ದುಕೊಳ್ಳಲು ಒತ್ತು ನೀಡಲಾಗಿದೆ.

<><><><>

ಸಕ್ರಿಯ ಆಡಳಿತ ಮತ್ತು ಸಕಾಲಿಕ ಅನುಷ್ಠಾನಕ್ಕಾಗಿ ಪ್ರಧಾನಮಂತ್ರಿಗಳ ಪ್ರಮುಖ ವೇದಿಕೆಯಾದ ಪ್ರಗತಿ, ತನ್ನ ೫೦ನೇ ಸಭೆ ಯಶಸ್ವಿಯಾಗಿ ನಡೆಸುವ ಮೂಲಕ ಮಹತ್ವದ ಮೈಲಿಗಲ್ಲನ್ನು ಸ್ಥಾಪಿಸಿದೆ. ೨೦೧೫ರಲ್ಲಿ ಪ್ರಧಾನಿ ನರೇಂದ್ರ ಮೋದಿ ಇದನ್ನು ಆರಂಭಿಸಿದ ನಂತರ, ಪ್ರಗತಿಯು ನೇರ ಪ್ರಧಾನಮಂತ್ರಿ ಪರಿಶೀಲನೆಯ ಮೂಲಕ ಪ್ರಮುಖ ಮೂಲಸೌಕರ್ಯ ಯೋಜನೆಗಳು ಮತ್ತು ಸಾರ್ವಜನಿಕ ಕುಂದುಕೊರತೆಗಳ ಮೇಲ್ವಿಚಾರಣೆ ಮತ್ತು ಪರಿಹಾರಗಳನ್ನು ಒದಗಿಸುವ ಮೂಲಕ ಆಡಳಿತವನ್ನು ಪರಿವರ್ತಿಸಿದೆ. ಈ ವೇದಿಕೆಯು ಕೇಂದ್ರ, ರಾಜ್ಯಗಳು ಮತ್ತು ಕೇಂದ್ರ ಸಚಿವಾಲಯಗಳನ್ನು ಒಂದೇ ಡಿಜಿಟಲ್ ಮುಖಾಮುಖಿಯಲ್ಲಿ ಒಗ್ಗೂಡಿಸುತ್ತದೆ. ಇಂದು, ಈ ವಿಶೇಷ ಸರಣಿಯಲ್ಲಿ, ನಾವು ಮಹಾರಾಷ್ಟ್ರದ ಸೋಲಾಪುರ ಸೂಪರ್ ಶಾಖೋತ್ಪನ್ನ ವಿದ್ಯುತ್ ಘಟಕದ ಯೋಜನೆಯ ಬಗ್ಗೆ ಮಾಹಿತಿ ಪಡೆಯೋಣ  ಮಹಾರಾಷ್ಟ್ರದ ಸೋಲಾಪುರ ಸೂಪರ್ ಶಾಖೋತ್ಪನ್ನ ವಿದ್ಯುತ್ ಘಟಕ ಪ್ರಾದೇಶಿಕ ಇಂಧನ ಭದ್ರತೆಯನ್ನು ಬಲಪಡಿಸುವಲ್ಲಿ ಮತ್ತು ರಾಜ್ಯದ ಬೆಳೆಯುತ್ತಿರುವ ವಿದ್ಯುತ್ ಬೇಡಿಕೆ ಪೂರೈಸುವಲ್ಲಿ ಪ್ರಮುಖ ಯೋಜನೆಯಾಗಿ ಹೊರಹೊಮ್ಮಿದೆ.

<><><><>

ದೇಶದ ಸಾರ್ವಭೌಮತ್ವಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ದಿವಂಗತ ಲೆಫ್ಟಿನೆಂಟ್ ಜನರಲ್ ಎಸ್.ಕೆ. ಸಿನ್ಹಾ ಅವರಂತಹ ವ್ಯಕ್ತಿಗಳು ಸರ್ಕಾರಕ್ಕೆ ಸ್ಪಷ್ಟ ಮತ್ತು ದೃಢವಾದ ನೀತಿಗಳನ್ನು ಕೈಗೊಳ್ಳಲು ಸ್ಫೂರ್ತಿಯಾಗಿದ್ದರು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ನಡೆದ ಲೆಫ್ಟಿನೆಂಟ್ ಜನರಲ್ ಎಸ್.ಕೆ. ಸಿನ್ಹಾ ಸ್ಮಾರಕ ಉಪನ್ಯಾಸವನ್ನು ವರ್ಚುವಲ್ ರೂಪದಲ್ಲಿ ಉದ್ದೇಶಿಸಿ ಅವರು ಮಾತನಾಡಿದರು. ಲೆಫ್ಟಿನೆಂಟ್ ಜನರಲ್ ಎಸ್.ಕೆ. ಸಿನ್ಹಾ ಅವರಿಗೆ ಗೌರವ ಸಲ್ಲಿಸಿದ ರಾಜನಾಥ್ ಸಿಂಗ್, ರಾಷ್ಟ್ರದ ಬಗ್ಗೆ ಅವರ ಅಚಲ ನಿಷ್ಠೆ ಮತ್ತು ಬದ್ಧತೆಯನ್ನು ಶ್ಲಾಘಿಸಿದರು. ಲೆಫ್ಟಿನೆಂಟ್ ಜನರಲ್ ಎಸ್.ಕೆ. ಸಿನ್ಹಾ ಅವರು ಯೋಧರ ನೇಮಕದ ಸಮಯದಲ್ಲಿ ಭಾರತೀಯ ಸೇನೆಗೆ ಆಧುನಿಕ ಚಿಂತನೆ ಮತ್ತು ಸಾಂಸ್ಥಿಕ ಬಲವನ್ನು ಒದಗಿಸಲು ಶ್ರಮಿಸಿದ್ದರು ಎಂದು ಹೇಳಿದರು.

ಧ್ವನಿ: ರಾಜನಾಥ್ ಸಿಂಗ್ (೨೦ ಸೆಕೆಂಡ್‌ಗಳು)

<><><><>

ಕೇಂದ್ರ ಸಂವಹನ ಸಚಿವಾಲಯ ದೆಹಲಿಯಲ್ಲಿ ನಿನ್ನೆ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವಾಲಯದೊಂದಿಗೆ ಎರಡು ಒಪ್ಪಂದಗಳಿಗೆ ಸಹಿ ಹಾಕಿದೆ. ಈ ಒಪ್ಪಂದಗಳ ಉದ್ದೇಶ ಗ್ರಾಮೀಣ ಜನತೆ ಮತ್ತು ರೈತರಿಗೆ ಉತ್ತಮ ಬ್ಯಾಂಕಿಂಗ್ ಸೇವೆ ಒದಗಿಸುವುದು ಹಾಗೂ ತಪ್ಪು ಮಾಹಿತಿಯನ್ನು ನಿಗ್ರಹಿಸುವುದಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಕೇಂದ್ರ ಸಂವಹನ ಸಚಿವ ಜ್ಯೋತಿರಾಧಿತ್ಯ ಸಿಂಧಿಯಾ ಎರಡು ಸಚಿವಾಲಯಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದರಿಂದ ರೈತರಿಗೆ ಅನುಕೂಲವಾಗಲಿದೆ. ಜೊತೆಗೆ ಸುಮಾರು ೧೫ ಕೋಟಿ ರೈತರಿಗೆ ಕೀಟನಾಶಕ ಗುಣಮಟ್ಟ ನಿಯಂತ್ರಣಕ್ಕೂ ಸಹಕಾರಿಯಾಗಲಿದೆ ಎಂದು ಹೇಳಿದರು. ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಎರಡು ದೇಶದ ಆರ್ಥಿಕತೆಯ ಬೆನ್ನೆಲುಬಾಗಿದೆ. ಈ ಒಪ್ಪಂದದಿಂದ ಗ್ರಾಮೀಣಾ ಜನರು ಮತ್ತು ಮಹಿಳೆಯರಿಗೆ ಹೆಚ್ಚುವರಿ ಜೀವನೋಪಾಯ ಅವಕಾಶಗಳು ಲಭ್ಯವಾಗುವುದಲ್ಲದೇ ಬ್ಯಾಂಕಿಂಗ್ ಸೇವೆಗಳು ಮತ್ತಷ್ಟು ಸುಲಭವಾಗಿ ದೊರಕಲಿವೆ ಎಂದು ಹೇಳಿದರು.

<><><><>

ಐಸಿಸಿ ಮಹಿಳಾ ಟಿ-೨೦ ವಿಶ್ವಕಪ್ ೨೦೨೬ ಅರ್ಹತಾ ಪಂದ್ಯಗಳನ್ನು ಪ್ರಕಟಿಸಲಾಗಿದೆ. ಇದೇ ೧೮ ರಿಂದ ಫೆಬ್ರವರಿ ೧ ರವರೆಗೆ ನೇಪಾಳದಲ್ಲಿ ನಡೆಯಲಿರುವ ಗ್ಲೋಬಲ್ ಕ್ವಾಲಿಫೈಯರ್ ಪಂದ್ಯಾವಳಿಯಲ್ಲಿ ಕೊನೆಯ ನಾಲ್ಕು ಸ್ಥಾನಗಳಿಗಾಗಿ ಹತ್ತು ತಂಡಗಳು ಪೈಪೋಟಿ ನಡೆಸಲಿವೆ. ಪಂದ್ಯಗಳು ಕಠ್ಮಂಡುವಿನಲ್ಲಿ ಎರಡು ಕಡೆ ನಡೆಯಲಿವೆ. ತ್ರಿಭುವನ್ ವಿಶ್ವವಿದ್ಯಾಲಯ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ಮತ್ತು ಅಪ್ಪರ್ ಮುಲ್ಪಾನಿ - ಕ್ರಿಕೆಟ್ ಕ್ರೀಡಾಂಗಣದಲ್ಲಿ ಅಭ್ಯಾಸ ಪಂದ್ಯಗಳು ನಡೆಯಲಿವೆ. ಪಂದ್ಯಾವಳಿಯು ಇದೇ ೧೮ರಿಂದು ಆರಂಭವಾಗಲಿದ್ದು, ಬಾಂಗ್ಲಾದೇಶ ನೆದರ್ಲ್ಯಾಂಡ್ಸ್ ಅನ್ನು ಎದುರಿಸಲಿದೆ ಮತ್ತು ಜಿಂಬಾಬ್ವೆ-ಪಪುವಾ ನ್ಯೂಗಿನಿಯಾವನ್ನು ಎದುರಿಸಲಿದೆ ಮತ್ತು ಆತಿಥೇಯ ನೇಪಾಳ ಐರ್ಲೆಂಡ್‌ಅನ್ನು ಎದುರಿಸಲಿದೆ. ಗುಂಪು ಎ ವಿಭಾಗದಲ್ಲಿ ಬಾಂಗ್ಲಾದೇಶ, ಐರ್ಲೆಂಡ್, ನಮೀಬಿಯಾ, ಪಪುವಾ ನ್ಯೂಗಿನಿಯಾ ಮತ್ತು ಅಮೆರಿಕ ತಂಡಗಳನ್ನು ಒಳಗೊಂಡಿದೆ. ಬಿ ಗುಂಪಿನಲ್ಲಿ ಆತಿಥೇಯ ನೇಪಾಳ, ನೆದರ್ಲ್ಯಾಂಡ್ಸ್, ಸ್ಕಾಟ್ಲೆಂಡ್, ಥೈಲ್ಯಾಂಡ್ ಮತ್ತು ಜಿಂಬಾಬ್ವೆ ಸೇರಿವೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>